# ಆಡೋಣ ಬಾ ಗೆಳೆಯಾ

ಅರವಿಂದ ಜಿ. ಜೋಷಿ, ಮೈಸೂರು
ಕಲೆ: ಸಂತೋಷ್ ಸಸಿಹಿತ್ಲು

ಆಡೋಣ ಬಾ ಗೆಳೆಯಾ
ಆಡೋಣ ಬಾ, ಕೈಯಲ್ಲಿರುವ
ಮೊಬೈಲ್ ನೋಡುವುದ ಬಿಟ್ಟು
ಸಾಕಷ್ಟು ಗಾಳಿ, ಬೆಳಕು ತುಂಬಿರುವ
ಬಟಾ ಬಯಲಲಿ, ಅದರೊಂದಿಗೆ
ಬೆರೆತು, ಎಲ್ಲವನು ಮರೆತು
ಖುಷಿಯಿಂದ ಕುಣಿಯುತ್ತ
ಆಡೋಣ ಬಾ

ಈ ಮೊಬೈಲ್ ಗೀಳು
ಹಾಳು ಮಾಡುವುದು ನಮ್ಮ ಬಾಳು
ಕಣ್ಣಿಗೂ, ಮನಸಿಗೂ ಮಾರಕವಾಗಿ
ಆರೋಗ್ಯ ಕೆಡಿಸುವುದನು ಬಿಟ್ಟು
ಮನಸು ಗಟ್ಟಿ ಮಾಡಿಕೊಂಡು
ಬಯಲಲಿ ಆಟಕೆ ಬಾ

ಓದು ಬರಹದ ಸಮಯದಲಿ
ಚೆನ್ನಾಗಿ ಓದಿ, ಎಲ್ಲರಿಗೂ ಬೇಕಾಗಿ
ಒಳ್ಳೆಯ ಬಾಲಕರಾಗಿ, ಮುಂದೆಯೂ
ಉತ್ತಮ ನಾಗರಿಕರಾಗಿ ಬಾಳಿ ಬದುಕಲು
ಇಂದೇ ಈಗಲೇ, ಆ ಮೊಬೈಲ್ ತೊರೆದು
ಆಡೋಣ ಬಾ



## ಕುಂಚ ಪ್ರಪಂಚ





**ವೈಷ್ಣವಿ**
4ನೇ ತರಗತಿ, ಅಮಾತ್ರ ಅಕಾಡೆಮಿ, ಬೆಂಗಳೂರು



**ಅವ್ಯಕ್ತ ಎಂ. ಕಶ್ಯಪ್**
4ನೇ ತರಗತಿ, ವಿವಿಎಸ್ ಸ್ಕೂಲ್, ನೆಲಮಂಗಲ



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:** editorsu@sudha.co.in